**ಕರ್ನಾಟಕ ಸರ್ಕಾರ**

**ಕಾರ್ಮಿಕ ಇಲಾಖೆ**

**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು ರವರ ನಡವಳಿಗಳು**

| | |
|---|---|
| ವಿಷಯ: | ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕರ್ನಾಟಕ ನಿಯಮಾವಳಿಗಳು 2006ರ ನಿಯಮ 44 ಮತ್ತು 48 ರಡಿ ಆದೇಶ ಹೊರಡಿಸುವ ಕುರಿತು. |
| ಉಲ್ಲೇಖ: | 1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಕಾಇ 207 ಎಲ್‌ಇಟಿ 2021, ದಿನಾಂಕ: 16-09-2021.<br>2. ಸಂಸದೀಯ ವ್ಯವಹಾರಗಳು ಮತ್ತು ಶಾಸನ ಇಲಾಖೆಯ ಟಿಪ್ಪಣಿ ಸಂಖ್ಯೆ: ಸಂವ್ಯಶಾಇ 224 ಅಶಾರ 2021, ದಿನಾಂಕ: 07-09-2021 |

******

**ಪೀಠಿಕೆ:**

ದೇಶದಾದ್ಯಂತ ಕೋವಿಡ್-19ರ ಸಾಂಕ್ರಾಮಿಕ ರೋಗವು ಹರಡಿದ್ದು ಇದರಿಂದ ದೇಶದಲ್ಲಿ ಹಾಗೂ ರಾಜ್ಯದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಹಿತ ಹಲವರು ಬಾಧಿತರಾಗಿರುತ್ತಾರೆ. ಈ ರೋಗದಿಂದ ಭಾದಿತರಾದವರು ಚಿಕಿತ್ಸೆಗಾಗಿ ಅಪಾರ ಪ್ರಮಾಣದ ಮೊತ್ತವನ್ನು ವೆಚ್ಚ ಮಾಡಿರುತ್ತಾರೆ. ಇದಲ್ಲದೇ, ಈ ಸಾಂಕ್ರಾಮಿಕ ರೋಗದಿಂದ ಬಾದಿತರು ಮೃತಪಟ್ಟಲ್ಲಿ ಅವರ ಅವಲಂಬಿತರು ಹಾಗೂ ಕುಟುಂಬದ ಸದಸ್ಯರು ಸಂಕಷ್ಟಕ್ಕೆ ಒಳಗಾಗಿರುತ್ತಾರೆ. ಈ ಹಿನ್ನಲೆಯಲ್ಲಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಸೂಕ್ತ ನೆರವು ಮತ್ತು ಸಹಾಯವನ್ನು ದೊರಕಿಸುವುದು ಅವಶ್ಯಕವೆಂದು ಮಂಡಳಿಯು ಪರಿಗಣಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಉಲ್ಲೇಖ- 1 ಮತ್ತು 2ರನ್ವಯ ಕೋವಿಡ್-19 ಕಾಯಿಲೆಯನ್ನು Major ailments ಅಡಿಯಲ್ಲಿ ಸೇರಿಸಲು ಮಂಡಳಿಯು ಅಧಿಸೂಚನೆಯನ್ನು ಹೊರಡಿಸುವ ಅಧಿಕಾರ ಹೊಂದಿರುವುದಾಗಿ ಸರ್ಕಾರ ಸೂಚಿಸಿದೆ. ಈ ಹಿನ್ನಲೆಯಲ್ಲಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

**ಮಂಡಳಿಯ ಆದೇಶ ಸಂಖ್ಯೆ: ಕಕಾಮಂ/ಕೋವಿಡ್/ಸಿಆರ್-21/2021-22, ಬೆಂಗಳೂರು ದಿನಾಂಕ:17-09-2021**

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕರ್ನಾಟಕ ನಿಯಮಗಳು, 2006 ರನ್ವಯ ಈಗಾಗಲೇ ನಿಯಮ 48ರಲ್ಲಿ ಕಟ್ಟಡ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಪ್ರಮುಖ ಕಾಯಿಲೆಗಳಿಗೆ ಚಿಕಿತ್ಸೆ ಪಡೆದಾಗ ರೂ.2.00 ಲಕ್ಷದ ವರೆಗೆ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಅವಕಾಶವಿದ್ದು, ನಿಯಮ 48(1) ರಲ್ಲಿ ಕೋವಿಡ್-19 ಖಾಯಿಲೆಯನ್ನು ಸಹ ಸೇರಿಸಿ ಆದೇಶಿಸಲಾಗಿದ್ದು ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಹಾಗೂ ಅವರ ಅವಲಂಬಿತರು ಕೋವಿಡ್-19 ಬಾದಿತರಾಗಿ ಚಿಕಿತ್ಸೆಯನ್ನು ಪಡೆದಿದ್ದಲ್ಲಿ ನಿಯಮ 48 ರಲ್ಲಿ ನಿಗಧಿಪಡಿಸಿರುವ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ರೂ.2,00,000/- ಗಳಿಗೆ ಮೀರದಂತೆ ಅವರ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಆದೇಶಿಸಿದೆ.

ಅದೇ ರೀತಿ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕರ್ನಾಟಕ ನಿಯಮಗಳು 2006 ರ ನಿಯಮ 44ರಡಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಮೃತಪಟ್ಟಲ್ಲಿ ಅವರ ನಾಮ ನಿರ್ದೇಶಿತರು ರೂ.54,000/- ಗಳವರೆಗೆ ಅನುಗ್ರಹರಾಶಿ ಮತ್ತು ಅಂತ್ಯಸಂಸ್ಕಾರ ವೆಚ್ಚವನ್ನು ಪಡೆಯಲು ಅರ್ಹರಿದ್ದು, ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಕೋವಿಡ್-19 ಕಾಯಿಲೆಯಿಂದ ಬಾಧಿತರಾಗಿ ಮರಣ ಹೊಂದಿದ್ದಲ್ಲಿ ಕಾರ್ಮಿಕರ ಅವಲಂಬಿತರಿಗೆ ವಿಶೇಷ ಪ್ರಕರಣಗಳೆಂದು ಪರಿಗಣಿಸಿ ರೂ.50,000/- ಗಳ ಅನುಗ್ರಹರಾಶಿಗೆ ಬದಲಾಗಿ ಒಟ್ಟು ರೂ.2,00,000/- ಗಳ ಅನುಗ್ರಹರಾಶಿಯನ್ನು ಪಡೆಯಲು ಅರ್ಹರಿರುತ್ತಾರೆ ಹಾಗೂ ಅಂತ್ಯ ಸಂಸ್ಕಾರ ವೆಚ್ಚ ರೂ.4,000/- ಗಳನ್ನು ಪಡೆಯಲು ಅರ್ಹರಿರುತ್ತಾರೆಂದು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:01-04-2021 ರಿಂದ ಅನ್ವಯವಾಗುವಂತೆ ಹೊರಡಿಸಿದೆ.

17/9

(ಅಕ್ರಂ ಪಾಷ., ಭಾ.ಆ.ಸೇ.)
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಹಾಗೂ ಕಾರ್ಯದರ್ಶಿಗಳು
ಕ.ಕ&ಇ.ನಿ.ಕಾ.ಕ. ಮಂಡಳಿ.

ಸ್ಥಳ: ಬೆಂಗಳೂರು
ದಿನಾಂಕ: 17-09-2021

ಗೆ,

1. ಎಲ್ಲಾ ಉಪ ಕಾರ್ಮಿಕ ಆಯುಕ್ತರು/ಸಹಾಯಕ ಕಾರ್ಮಿಕ ಆಯುಕ್ತರು/ಕಾರ್ಮಿಕ ಅಧಿಕಾರಿಗಳು.
2. ಎಲ್ಲಾ ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರು – ಕಾರ್ಮಿಕ ಅಧಿಕಾರಿಗಳ ಮೂಲಕ.

ಪ್ರತಿಯನ್ನು:-

1. ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ರವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ – ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ರವರ ಆದ್ಯ ಗಮನಕ್ಕೆ ತರಲು ಕೋರಲಾಗಿದೆ.
2. ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಬೆಂಗಳೂರು- ಇವರ ಆಪ್ತ ಕಾರ್ಯದರ್ಶಿಗಳ ಮೂಲಕ ಮಾಹಿತಿಗಾಗಿ.
3. ಮಾನ್ಯ ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬೆಂಗಳೂರು- ಇವರ ಆಪ್ತ ಕಾರ್ಯದರ್ಶಿಗಳ ಮೂಲಕ ಮಾಹಿತಿಗಾಗಿ.